(ಅ) ಮೂಡಿಗೆರೆ ತಾಲ್ಲೂಕು ಹಿರೆಬೈಲು ಗ್ರಾಮಕ್ಕೆ ಒಂದು ಪ್ರೌಢಶಾಲೆಯನ್ನು ಹೊಂದಲು ಬೇಕಾದ ಅರ್ಹತೆಗಳೆಲ್ಲಾ ಇವೆ ಎಂಬುದನ್ನು ಪರಿಗಣಿಸಲಾಗಿಯೇ ;

(ಇ) ವಿದ್ಯಾಭ್ಯಾಸದಲ್ಲಿ ಈ ಗ್ರಾಮದವರು ಸೇಕಡಾ ಪ್ರಮಾಣ ಕಡಿಮೆ ಇರುವುದರಿಂದ ಈ ಗ್ರಾಮಕ್ಕೆ ಒಂದು ಪ್ರೌಢಶಾಲೆಯನ್ನು ಮುಂದಿನ ವರ್ಷದಿಂದ ಮಂಜೂರು ಮಾಡಲಾಗುವುದೇ?

ಶ್ರೀ ಎ. ಆರ್. ಬದರಿನಾರಾಯಣ (ಶಿಕ್ಷಣ ಮಂತ್ರಿಗಳು.).—

(ಅ) ಬಂದಿದೆ.

(ಆ) ಈ ಗ್ರಾಮಕ್ಕೆ ಪ್ರೌಢಶಾಲೆಯ ಅವಶ್ಯಕತೆಯ ವಿಷಯವನ್ನು ಪರಿಶೀಲಿಸಲಾಗಿದೆ.

(ಇ) ಮುಂದಿನ ವರ್ಷ ಹೊಸ ಪ್ರೌಢಶಾಲೆಗಳನ್ನು ತೆಗೆಯುವಾಗ ಈ ವಿನ್ನಹವನ್ನು ಪರಿಶೀಲಿಸಲಾಗುವುದು.

ಮಲ್ಲೇಗೌಡ ಜನರ ಸಾರ್ವಜನಿಕ ಆಸ್ಪತ್ರೆ, ಚಿಕ್ಕಮಗಳೂರು.

156. ಶ್ರೀ ಬಿ. ಪುಟ್ಟಸ್ವಾಮಿ (ಮೂಡಿಗೆರೆ).—

ಆರೋಗ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಚಿಕ್ಕಮಗಳೂರು ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಯಲ್ಲಿ ದಿನೇ ದಿನೇ ರೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದು ನಿಜವೇ;

(ಆ) ಹಾಗಿದ್ದಲ್ಲಿ ಒಳರೋಗಿಗಳಿಗೆ ಸ್ಥಳಾವಕಾಶದ ಅಭಾವದಿಂದಾಗಿ ಆಸ್ಪತ್ರೆಯ ಹಾಸಿಗೆಗಳನ್ನು 180 ರಿಂದ 300ಕ್ಕೆ ಹೆಚ್ಚಿಸಲಾಗುವುದೇ;

(ಇ) ಚಿಕ್ಕಮಗಳೂರು ಮಲ್ಲೇಗೌಡರ ನದರಿ ಆಸ್ಪತ್ರೆಯಲ್ಲಿ ಇ.ಸಿ. ಜಿ. ಯಂತ್ರ ಇಲ್ಲದೆ ರೋಗಿಗಳಿಗೆ ತೊಂದರೆಯಾಗುತ್ತಿರುವುದರಿಂದ ಈ ಯಂತ್ರವನ್ನು ತೀವ್ರ ಒದಗಿಸಲಾಗುವುದೇ.

(ಈ) ಚಿಕ್ಕಮಗಳೂರಿನ ಮಕ್ಕಳ ರೋಗಿಗಳು ಜಾಸ್ತಿಯಾಗಿರುವುದರಿಂದ ಮಕ್ಕಳ ವಾರ್ಡ್ ಹಾಲಿ ಕಟ್ಟಡವನ್ನು ವಿಸ್ತರಿಸಲಾಗುವುದೇ;

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯಮಂತ್ರಿಗಳು) .—

(ಅ) ಹೌದು—ನಿಜ.

(ಆ) ಹೌದು-ಆಸ್ಪತ್ರೆಯ ಹಾಸಿಗೆಗಳನ್ನು 180ರಿಂದ 250ಕ್ಕೆ ಹೆಚ್ಚಿಸಲು ಪ್ರಸ್ತಾಪ ಇದೆ.

(ಇ) ಇ. ಸಿ. ಜಿ. ಯಂತ್ರವನ್ನು ಒದಗಿಸಲು ಪ್ರಸ್ತಾಪ ನಡೆಯುತ್ತಿದೆ.

(ಈ) ಈ ವಿಷಯವನ್ನು ಪರಿಶೀಲಿಸಲಾಗುವುದು.

DAMAGE TO CROPS DUE TO RAINS AND PESTS IN BUNTWAL TALUK

159. Sri B. V. LAKKILAYA (Bantwal).—

Will the Minister for Agriculture and Forests be pleased to state :—

(*a*) whether it has come to the notice of the Government that unusual heavy rains in June 1972 have caused damage to seedlings and adversely affected agricultural operations in vast areas of Buntwal Taluk of South Kanara ;